ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

## ಪಾಟೀಸವಾಲು : 1ನೇ ಪ್ರತಿವಾದಿ ಪರ ವಕೀಲರಿಂದ

ದಾವಾ ಸ್ವತ್ತು ನನಗೆ **1985** ರಲ್ಲಿ ಬಂದಿರುತ್ತದೆ. ದಾವಾ ಸ್ವತ್ತನ್ನು ಜಿಲ್ಲಾ ಪಂಚಾಯತಿಯವರು ನನಗೆ ಸರ್ಕಾರದ ಆಶ್ರಯದ ಯೋಜನೆಯ ಅಡಿಯಲ್ಲಿ ನನಗೆ ನೀಡಿರುತ್ತಾರೆ. ಪ್ರತಿವಾದಿ ಮಂಗಳಪ್ಪರವರ ಅಜ್ಜ ತಿಮ್ಮಪ್ಪ ಇರುತ್ತಾರೆ ಎಂದರೆ ಸರಿ. ನನಗೆ ದಾವಾ ಸ್ವತ್ತನ್ನು ಮಂಜೂರು ಮಾಡುವ ಮೊದಲೇ ಸದ್ರಿ ತಿಮ್ಮಪ್ಪರವರಿಗೆ ಆಸ್ತಿ ನಂ.**554** ಅನ್ನು ಗ್ರಾಮಪಂಚಾಯಿತಿ ಅಧಿಕಾರಿರವರು ಆಶ್ರಯ ಯೋಜನೆ ಅಡಿಯಲ್ಲಿ ಮಂಜೂರು ಮಾಡಿದ್ದರು ಎಂದರೆ ಸರಿ. ಸದ್ರಿ ತಿಮ್ಮಪ್ಪರವರು ಸುಮಾರು **1987-1988** ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದ್ರಿ ತಿಮ್ಮಪ್ಪರವರು ತೀರಿಹೋದ ನಂತರ ಅವರ ಮಗಳಾದ ಗುತ್ತೆವ್ವ ಗಂಡ ಗಂಗಪ್ಪ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಸದ್ರಿ ಗುತ್ತೆವ್ವರವರು ತೀರಿಕೊಂಡು ಸುಮಾರು **10-12** ವರ್ಷ ಆಗಿರುತ್ತದೆ ಎಂದರೆ ಸರಿ. ಗುತ್ತೆವ್ವ ರವರು ತೀರಿಹೋದ ನಂತರ ಸದ್ರಿ ಆಸ್ತಿಯು ಅವರ ಮಕ್ಕಳಾದ ದ್ಯಾಮವ್ವ, ಗಂಗವ್ವ ಮತ್ತು **1**ನೇ ಪ್ರತಿವಾದಿಯಾದ ಮಂಗಳಪ್ಪ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. **1**ನೇ ಪ್ರತಿವಾದಿಯ ಆಸ್ತಿ ನಂ.**554** ರ ಪೂರ್ವಕ್ಕೆ ಮೊದಲಿಗೆ ಮೌಲಾಬೀ ಹುಸೇನ್ ಸಾಬ್ ರವರ ಮನೆ ಇದ್ದು, ಈಗ ತಾರಾಚಂದ್ ರವರು ಸದ್ರಿ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ. ಪಶ್ಚಿಮಕ್ಕೆ ರಸ್ತೆ ಇದ್ದು, ರಸ್ತೆ ಆದ ನಂತರ ಪ್ರಹ್ಲಾದ್ ಇವರ ಮನೆ ಇರುತ್ತದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಇದ್ದು, ರಸ್ತೆ ಆದ ನಂತರ ಶ್ರೀನಿವಾಸ್ ಎನ್ನುವವರ ಮನೆ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಹುಲಿಗೆಮ್ಮದೇವಸ್ಥಾನಕ್ಕೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ.

**1982** ರಿಂದ **1985** ರವರೆಗೆ ಹುಲಿಗಿ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದೆನು ಎಂದರೆ ಸರಿ. ನನಗೆ ಹುಲಿಗಿಯಲ್ಲಿ ಎರಡು ಆರ್.ಸಿ.ಸಿ ಮನೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಒಂದು ಆರ್.ಸಿ.ಸಿ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಜಲ್ಲಿ ಕಲ್ಲು ಕ್ರಷರ್ ಮಿಷನ್ ಗೆ ಪಾಲುದಾರನು ಸಹ ಇರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನು ಸಹ ಇರುತ್ತೇನೆ. ನಾನು ಸರ್ಕಾರದವರು ನೀಡಿದ ಹಕ್ಕುಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಆ ರೀತಿ ನಾನು ಹಕ್ಕುಪತ್ರವನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಕ್ಕುಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ

ಪತ್ರದಲ್ಲಿ ತಿಳಿಸಿರುವಂತೆ ಚೆಕ್ಬ್ಂಧಿಯ ಒಳಗೆ ಇರುವ ಸ್ವತ್ತು ಪ್ರಸ್ತುತ ಯಾವುದು ಇಲ್ಲ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಹುಲಿಗೆಮ್ಮ ದೇವಸ್ಥಾನಕ್ಕೆ ಹೋಗುವ ರಸ್ತೆ ಇದ್ದು, ಆ ರಸ್ತೆಯಲ್ಲಿ ಒಂದು ಭಾಗವನ್ನು ನಾನು 553 ಆಸ್ತಿ ಎಂದು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅಸ್ಥಿತ್ವದಲ್ಲಿ ಇಲ್ಲದ ಕಾರಣ ನಾನು ಅದರ ಹಕ್ಕುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 21 ದಾಖಲೆಗಳನ್ನು ನಾನು ಗ್ರಾಮಪಂಚಾಯಿತಿ ಸದಸ್ಯನಿದ್ದಾಗ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಶೌಚಾಲಯ ಕಟ್ಟಿಸುವ ಸಲುವಾಗಿ ಗುಂಡಿಯನ್ನು ತೆಗೆಯುತ್ತಿದ್ದನು. ಆ ಸಂದರ್ಭದಲ್ಲಿ ನಾನು ಪಂಚಾಯಿತಿ ಕಚೇರಿಗೆ ಈ ಬಗ್ಗೆ ತಕರಾರು ಅರ್ಜಿಯನ್ನು ನೀಡಿರುತ್ತೇನೆ. ಸದ್ರಿ ತಕರಾರು ಅರ್ಜಿಯನ್ನು ನ್ಯಾಯಾಲಯಕ್ಕೆ ಸಹ ನೀಡಿರುತ್ತೇನೆ. ಈ ಬಗ್ಗೆ ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ. ಆ ರೀತಿ 1 ನೇ ಪ್ರತಿವಾದಿಯು ಯಾವುದೇ ಗುಂಡಿಯನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ಸಂದರ್ಭವನ್ನು ಸುಳ್ಳಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕುವ 4-5 ವರ್ಷಗಳ ಮೊದಲೇ 1 ನೇ ಪ್ರತಿವಾದಿಯವರ ಮನೆಯಲ್ಲಿ ಶೌಚಾಲಯ ಇತ್ತು ಎಂದರೆ ಸರಿಯಲ್ಲ. ನಾನು ವಕೀಲರ ಮುಖಾಂತರ ಲೀಗಲ್ ನೋಟೀಸನ್ನು ನೀಡುವ ಮೊದಲೇ 1 ನೇ ಪ್ರತಿವಾದಿಯವರ ಮನೆಯಲ್ಲಿ ಶೌಚಾಲಯ ಇತ್ತು ಎಂದರೆ ಸರಿಯಲ್ಲ. ಈಗ ಹೋಗಿ ನೋಡಿದರೂ ಸಹ 1 ನೇ ಪ್ರತಿವಾದಿಯವರ ಮನೆಯಲ್ಲಿ ಶೌಚಾಲಯ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಈಗ ಇರಬಹುದು ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ದನಕರಗಳನ್ನು ಕಟ್ಟುವುದು, ಮೇವು, ಹಾಗೂ ಇನ್ನಿತರೆ ಕಟ್ಟಿಗೆಗಳನ್ನು ಶೇಖರಿಸುತ್ತಾ ಉಪಯೋಗಿಸುತ್ತಿದ್ದ ಬಗ್ಗೆ ನೀವು ಯಾವುದಾದರು ಫೋಟೋಗಳನ್ನು ಹಾಜರುಪಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು

**ನುಡಿಯುತ್ತಾರೆ. ದಾವಾ ಆಸ್ತಿ ಅಸ್ಥಿತ್ವದಲ್ಲಿ ಇಲ್ಲದ ಕಾರಣ ನಾನು ಹೇಳಿದಂತೆ 1 ನೇ**

**O.S.No./113/2017, PW-1**
**Date :23-11-2022**

ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ದನಕರಗಳನ್ನು ಕಟ್ಟುವುದು ಹಾಗೂ ನನಗೆ ತೊಂದರೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಆಶ್ರಯ ಯೋಜನೆ ಅಡಿಯಲ್ಲಿ ಮನೆಯನ್ನು ಸರ್ಕಾರವು ನಿರಾಶ್ರಿತರಿಗೆ ನೀಡುತ್ತಾರೆ ಎಂದರೆ ಸರಿ. ಹುಲಿಗಿಯಲ್ಲಿ ನಾನು ಶ್ರೀಮಂತನಾಗಿದ್ದು, ನನಗೆ ದಾವಾ ಸ್ವತ್ತನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ನನ್ನ ಗ್ರಾಮಪಂಚಾಯಿತಿ ಸದಸ್ಯನ ಅಧಿಕಾರಾವಧಿಯಲ್ಲಿ ದಾಖಲೆಗಳನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಶೌಚಾಲಯವನ್ನು ಕಟ್ಟಿಸಲು ಹಾಗೂ ಸೆಪ್ಟಿಕ್ ಟ್ಯಾಂಕನ್ನು ಕಟ್ಟಿಸಲು ಪ್ರಯತ್ನಿಸಿದನು ಎಂದು ನನ್ನ ಮುಖ್ಯವಿಚಾರಣೆಯಲ್ಲಿ ಬರೆಸಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿ ಇಲ್ಲದಿದ್ದರೂ ಸಹ ಅದಕ್ಕೆ ಕಾನೂನಿನ ಮುಖಾಂತರ ದಾವಾ ಸ್ವತ್ತಿನ ಬಗ್ಗೆ ಅಧಿಕೃತ ದಾಖಲೆಗಳನ್ನು ಹಾಗೂ ಆದೇಶವನ್ನು ಪಡೆಯುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ರಸ್ತೆ ಇರುವ ಕಾರಣ ಪ್ರತಿವಾದಿಯು ನನಗೆ ತೊಂದರೆ ಕೊಡುವ ಸಂದರ್ಭ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನಗೆ ಯಾವುದೇ ತೊಂದರೆ ನೀಡದಿದ್ದರೂ ಸಹ ನಾನು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ**

**( ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರುವಿಚಾರಣೆ ಇಲ್ಲ.**

**(ಇಂದು ದಿನಾಂಕ 23-11-2022 ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಕೊಪ್ಪಳ.